# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.234-2016** **ಪಿ . ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಜಯಮ್ಮ<br>ದಡದಹಳ್ಳಿ ಗ್ರಾಮ, ಮೈಸೂರು. |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 29-08-2024.** |

**ಪಾಟೀ ಸವಾಲುಃ 1, 2 ಮತ್ತು 4 ನೇ ಪ್ರತಿವಾದಿ ಪರ ಶ್ರೀ ಹೆಚ್.ಪಿ.ಎಸ್ ವಕೀಲರಿಂದಃ**

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳನ್ನು ನಾನೇ ಹೇಳಿ ಬರೆಸಿರುತ್ತೇನೆ ಎಂದರೆ ಸರಿ. ನನ್ನ ತಂದೆ ಚಿಕ್ಕರಾಚೇಗೌಡ ರವರಿಗೆ ನನ್ನ ತಂದೆಯನ್ನು ಒಳಗೊಂಡಂತೆ 3 ಜನ ಸಹೋದರರು ಇರುತ್ತಾರೆ. ಅವರುಗಳೆಂದರೆ ಕುಳ್ಳೇಗೌಡ, ಸಿದ್ಧಯ್ಯ ಮತ್ತು ನನ್ನ ತಂದೆಯವರಾಗಿರುತ್ತಾರೆ ಎಂದರೆ ಸರಿ. ನನ್ನ ತಂದೆ ಮತ್ತು ಅವರ ಸಹೋದರರು ಪ್ರತ್ಯೇಕ ಪ್ರತ್ಯೇಕವಾಗಿ ವಾಸವಾಗಿರುತ್ತಾರೆ. ಅವರುಗಳು ಎಷ್ಟು ವರ್ಷಗಳಿಂದ ಪ್ರತ್ಯೇಕ ಪ್ರತ್ಯೇಕವಾಗಿ ವಾಸವಾಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಮತ್ತು ಚಿಕ್ಕಪ್ಪಂದಿರು ಸುಮಾರು 60 ವರ್ಷಗಳಿಂದ ಪ್ರತ್ಯೇಕ ಪ್ರತ್ಯೇಕವಾಗಿ ವಾಸವಾಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮತ್ತು ಅವರ ಸಹೋದರರು ಸುಮಾರು 60 ವರ್ಷಗಳಿಂದ ಪ್ರತ್ಯೇಕ ಪ್ರತ್ಯೇಕವಾಗಿ ವಾಸವಾಗಿರುವ ವಿಚಾರ ಗೊತ್ತಿದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ನನ್ನ ತಂದೆ ಮತ್ತು ಅವರ ಸಹೋದರರು ಆಸ್ತಿಗಳನ್ನು ಸಹ ಬೇರೆ ಬೇರೆ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ತಂದೆ ಮತ್ತು ಅವರ ಸಹೋದರರು ಅವರವರ ಭಾಗಕ್ಕೆ ಬಂದ ಆಸ್ತಿಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಅನುಭವಿಸುತ್ತಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಕುಳ್ಳೇಗೌಡ ರವರ ಭಾಗಕ್ಕೆ ಬಂದ ಆಸ್ತಿಗಳನ್ನು ಕುಳ್ಳೇಗೌಡ ರವರೇ ಅನುಭವಿಸುತ್ತಿರುತ್ತಾರೆ ಎಂದರೆ ಸರಿ. ಅದೇ ರೀತಿ ಸಿದ್ಧಯ್ಯ ನವರು ಅವರ

ಭಾಗಕ್ಕೆ ಬಂದಿ ಆಸ್ತಿಗಳನ್ನು ಅವರು ಅನುಭವಿಸುತ್ತಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿ ನನ್ನ ತಂದೆಯವರ ಆಸ್ತಿಯೂ ಸಹ ಅವರ ಬಳಿ ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ತಂದೆಯವರ ಆಸ್ತಿ 5 ನೇ ಪ್ರತಿವಾದಿ ಸಿದ್ಧಯ್ಯ ನವರ ಬಳಿ ಇರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ನನ್ನ ತಂದೆ ಮತ್ತು ಅವರ ಸಹೋದರರ ನಡುವೆ ವಿಭಾಗವಾಗುವುದಕ್ಕೆ ಪೂರ್ವದಲ್ಲಿ ನಮ್ಮ ಒಟ್ಟು ಕುಟುಂಬಕ್ಕೇ ಸೇರಿದ ಒಟ್ಟು ಎಷ್ಟು ವಿಸ್ತೀರ್ಣದ ಸ್ವತ್ತು ಇತ್ತು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆಯ ಸಹೋದರನಾದ ಕುಳ್ಳೇಗೌಡ ರವರ ಈಗ ಮರಣ ಹೊಂದಿದ್ದು, ಅವರ ಪತ್ನಿ ಮತ್ತು ಮಕ್ಕಳು ಇರುತ್ತಾರೆ ಎಂದರೆ ಸರಿ.

4. ನನ್ನ ತಂದೆಯವರು ಮರಣಹೊಂದಿ ಎಷ್ಟು ವರ್ಷಗಳಾಗಿವೆ ಎಂದು ನನಗೆ ಗೊತ್ತಿಲ್ಲ. ನನ್ನ ಮದುವೆಯಾಗಿ ಸುಮಾರು 40 ವರ್ಷಗಳಾಗಿರುತ್ತವೆ. ನಾನು ಮದುವೆಯಾಗುವುದಕ್ಕೆ ಪೂರ್ವದಲ್ಲಿಯೇ ನನ್ನ ತಂದೆಯವರು ಮರಣ ಹೊಂದಿದ್ದರು. ನಾನು ಚಿಕ್ಕವಳಿದ್ದಾಗಲೇ ನನ್ನ ತಂದೆಯವರು ಮರಣ ಹೊಂದಿದ್ದು, ಆ ಸಮಯ ನನಗೆ ತಿಳುವಳಿಕೆ ಇರಲಿಲ್ಲ.

5. ನನ್ನ ತಂದೆಯವರಿಗೆ ನಾನು ಮತ್ತು 1 ನೇ ಪ್ರತಿವಾದಿ ಇಬ್ಬರೇ ಮಕ್ಕಳಾಗಿರುತ್ತೇವೆ. ನನ್ನ ತಂದೆಯವರ ಮರಣಾ ನಂತರ 1 ನೇ ಪ್ರತಿವಾದಿಯರೇ ನಮ್ಮ ಕುಟುಂಬವನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ನನ್ನ ತಂದೆಯವರ ಮರಣಾ ನಂತರ 1 ನೇ ಪ್ರತಿವಾದಿಯವರೇ ಕುಟುಂಬದ ಯೋಗಕ್ಷೇಮ ಮತ್ತು ಆಗುಹೋಗುಗಳನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಾಯಿಯವರು ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ತಾಯಿಯವರು ಮರಣ ಹೊಂದಿ ಸುಮಾರು 30 ವರ್ಷಗಳಾಗಿರುತ್ತವೆ. ನನ್ನ ತಾಯಿಯವರ ಆಕೆಯ ಜೀವಿತಾವಧಿಯಲ್ಲಿ ಕೂಲಿ ಕೆಲಸ ಮಾಡುತ್ತಿದ್ದರು. ನನ್ನ ವಾದ ಪತ್ರ ಹಾಗೂ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನನ್ನ ತಂದೆಯವರ ಮರಣಾ ನಂತರ ನನ್ನ ಸಹೋದರಿಯಾಗಿ 1 ನೇ ಪ್ರತಿವಾದಿಯವರೇ ಕುಟುಂಬದ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿದ್ದರು ಎಂದು ನಮೂದಿಸಲಾಗಿರುತ್ತದೆ ಎಂದರೆ ಸರಿಯಲ್ಲ.

6. ನಾನು ನನ್ನ ಮದುವೆ ನಂತರ ನನ್ನ ಗಂಡನ ಊರಾದ ದಡದಹಳ್ಳಿಯಲ್ಲಿ ವಾಸವಾಗಿರುತ್ತೇನೆ ಎಂದರೆ ಸರಿ. ನಾನು ಮದುವೆಯಾಗಿ ಹೋದ ನಂತರ ಕುಟುಂಬದ ವ್ಯವಹಾರವನ್ನಾಗಲಿ, ಆಸ್ತಿಯ ವ್ಯವಹಾರವನ್ನಾಗಲಿ ನೋಡಿ ಕೊಂಡಿರುವುದಿಲ್ಲ ಎಂದರೆ ಸರಿ. ನನ್ನ ತಾಯಿಯ ಮರಣಾ ನಂತರ 1 ನೇ ಪ್ರತಿವಾದಿಯವರು ಹಳ್ಳಿದಿಡ್ಡಿ ಗ್ರಾಮದಲ್ಲಿಯೇ ವಾಸವಾಗಿದ್ದು ಕುಟುಂಬದ ವ್ಯವಹಾರ ಮತ್ತು ವ್ಯವಸಾಯವನ್ನು ಮಾಡುತ್ತಿದ್ದರು ಎಂದರೆ ಸರಿ.

7. ದಾವಾ 1 ನೇ ಐಟಂ ಸ್ವತ್ತು 4 ನೇ ಪ್ರತಿವಾದಿಯವರ ಹೆಸರಿನಲ್ಲಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ದಾವಾ 1 ನೇ ಐಟಂ ಸ್ವತ್ತನ್ನು 3 ನೇ ಪ್ರತಿವಾದಿಯವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಸಹೋದರಿಯಾದ 1 ನೇ ಪ್ರತಿವಾದಿಯವರು ದಾವಾ 1 ನೇ ಐಟಂ ಸ್ವತ್ತನ್ನು 3 ನೇ ಪ್ರತಿವಾದಿಯವರಿಗೆ ಮಾರಾಟ ಮಾಡಿರುವ ಸಂಪೂರ್ಣ ವಿಚಾರ ನನಗೆ ಗೊತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪತ್ರವನ್ನು ತೆಗೆಸಿ ನೋಡಿದಾಗ ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತಾಯಿತು ಎಂದು ನುಡಿಯುತ್ತಾರೆ. ದಾವಾ 1 ನೇ ಐಟಂ ಸ್ವತ್ತನ್ನು ಮಾರಾಟ ಮಾಡಿರುವ ವಿಚಾರ ನನಗೆ ಪತ್ರ ತೆಗೆಸಿ ನೋಡಿದ ನಂತರವೇ ತಿಳಿಯಿತು ಎಂಬ ವಿಚಾರವನ್ನು ನನ್ನ ವಾದಪತ್ರದಲ್ಲಿ ನಮೂದು ಮಾಡಲು ನನಗೆ ತೊಂದರೆ ಇರಲಿಲ್ಲ ಎಂದರೆ ಸರಿ.

8. 3 ನೇ ಪ್ರತಿವಾದಿ ಹೆಚ್.ಎನ್.ನಂಜುಂಡಯ್ಯ ಹಳ್ಳಿದಿಡ್ಡಿ ಗ್ರಾಮದವರು ಎಂದರೆ ಸರಿ. 3 ನೇ ಪ್ರತಿವಾದಿಯವರು ದಾವಾ 1 ನೇ ಐಟಂ ಸ್ವತ್ತನ್ನು ಕ್ರಯಕ್ಕೆ ಪಡೆದ ನಂತರ ಅವರೇ ಉಳುವೆ ಮಾಡುತ್ತಿದ್ದ ವಿಚಾರ ನನಗೆ ಗೊತ್ತು ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ, ದಾವಾ 1 ನೇ ಐಟಂ ಸ್ವತ್ತನ್ನು ಕ್ರಯಕ್ಕೆ ಪಡೆದ ನಂತರ ಉಳುಮೆ ಮಾಡುತ್ತಿರು ವಿಚಾರ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

9. 1 ನೇ ಪ್ರತಿವಾದಿಯವರು ದಾವಾ ಷೆಡ್ಯೂಲ್ 1 ನೇ ಐಟಂ ಸ್ವತ್ತನ್ನು ನಮ್ಮ ಕುಟುಂಬದ ದರ್ದಿಗಾಗಿ ದಿ.22-10-1998 ರಂದು 3 ನೇ ಪ್ರತಿವಾದಿ ಹೆಚ್.ಎನ್.ನಂಜುಂಡಯ್ಯ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯೂ ಕುಟುಂಬದ ಯಜಮಾನಳಾಗಿ ಕುಟುಂಬದ ದರ್ದಿಗಾಗಿ

ದಾವಾ ಷೆಡ್ಯೂಲ್ 1 ನೇ ಐಟಂ ಸ್ವತ್ತನ್ನು 3 ನೇ ಪ್ರತಿವಾದಿ ನಂಜುಂಡಯ್ಯ ರವರಿಗೆ ಮಾರಾಟ ಮಾಡಿರುವುದರಿಂದ ಸದರಿ ಮಾರಾಟವು ನನ್ನನ್ನು ಸಹ ಬದ್ಧಪಡಿಸುತ್ತದೆ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶವನ್ನು ಕೋರಿದ್ದು ಸಮಯಾವಕಾಶವನ್ನು ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**